# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ

## ಸಿ.ಸಿ ನಂಃ 272/ 2020

| | | |
|---|---|---|
| ಸಾಕ್ಷಿಯ ಹೆಸರುಃ | ಬಲವಂತಪ್ಪಗೌಡ | ಪ್ರಾಸಾಃ 02 |
| ತಂದೆ/ಗಂಡನ ಹೆಸರುಃ | ಮಲ್ಲಣ್ಣಗೌಡ | ಚಾಸಾಃ 02 |
| ವಯಸ್ಸುಃ | 55 ವರ್ಷ | ದಿಃ 07-02-2024 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶೆಟ್ಟಿಕೇರಾ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾ 3 ಮತ್ತು ಆರೋಪಿತರ ರವರ ಪರಿಚಯ ಇರುತ್ತದೆ. ಆರೋಪಿತರು ಮತ್ತು ಚಾಸಾ 1 ರವರ ನಡುವೆ ಆದ ಜಗಳದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

**(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋದಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸಹಾಯಕ ಸರಕಾರಿ ಅಭಿಯೋಜಕರು ಭಿನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾಗ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 2.10.2019 ರಂದು ಬೆ. 10.15 ರಿಂದ 11.15 ಗಂಟೆಯವರೆಗೆ ಪೋಲಿಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರಃ ಶ್ರೀ ಯು.ಬಿ.ಎಂ. ವಕೀಲರವರಿಂದಃ**

ಯಾವುದೇ ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ**